**ಡಿಡಬ್ಲೂ.1: ಆಸೀಫ್ ಅಲಿ**

**<u>ದಿನಾಂಕಃ10.06.2026 ರಂದು ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ</u>**

ಪಿರ್ಯಾದುದಾರರು ಪರಿಚಯವಿರುತ್ತಾರೆ. ಪಿರ್ಯಾದುದಾರರ ಜೊತೆ ನೀವು ಹಣದ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿ. ನಿ.ಪಿ1 ರ ಚೆಕ್ ಹಾಗೂ ಸಹಿ ನನ್ನದೇ ಆಗಿರುತ್ತದೆ. ಪಿರ್ಯಾದುದಾರರಿಂದ ರೂ 50 ಸಾವಿರ ರೂಗಳನ್ನು ಪಡೆದುಕೊಂಡಿದ್ದು ಅದರಲಿಲ್ಲ ರೂ 35 ಸಾವಿರಗಳನ್ನು ಮರುಪಾವತಿಸಿರುತ್ತೇನೆ ಉಳಿಕೆ 15 ಸಾವಿರ ನೀಡಬೇಕೆಂದು ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿದಿರುತ್ತೀರಿ ಎಂದರೆ ಸರಿಯಲ್ಲ.

ಪಿರ್ಯಾದುದಾರರಿಂದ ನೀವು 2 ಲಕ್ಷ ರೂಗಳನ್ನು ಸಾಲ ಪಡೆದು ಅದರ ಮರುಪಾವತಿಗಾಗಿ ವಿವಾದಿತ ಚೆಕ್ ಅನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಬಾದ್ಯತೆಯಿಂದ ತಪ್ಪಿ ಸಿಕೊಳ್ಳಲು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ನಾನು ಪಿರ್ಯಾದಿನಲ್ಲಿ ನಮೂದು ಮಾಡಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ. ಪಿರ್ಯಾದುದಾರರಿಗೆ 2 ಲಕ್ಷ ರೂಗಳನ್ನು ನೀಡಲು ಬಾದ್ಯಸ್ಥರಾಗಿದ್ದರು ಸಹ ಹೊಣೆಗಾರಿಕೆಯಿಂದ ತಪ್ಪಿ ಸಿಕೊಳ್ಳಲು ಸುಳ್ಳ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು